**DR.C.N.MANJUNATH**
**MBBS. MD. DM (Cardiology)**
**Professor of Cardiology &**
**DIRECTOR**

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂ
**Sri Jayadeva Institute of Cardiovascular Sciences and Research**
**(Govt. of Karnataka – Regd. Autonomous Institute)**
Bannerghatta Road, 9th Block Jayanagar, Bengaluru – 560069
Direct Line: 22977456, Phone: 91- 80- 22977422, 433, EPABX: 22977400, 500
Fax: 91 - 80 -26534477, TeleFax: 22977422, Email: director@jayadevacardiology.c
drcnmanjunath@gmail.com , Website: www.jayadevacardiology.com

Date:

Ref:

ಕ. ಸಂಖ್ಯೆ: ಎಸ್‌ಜೆಐಸಿಆರ್/ಆ.ಶಾ./ಪ.ವ/2023-24 ದಿ. 20ನೇ ಜೂನ್ 2023

# ಪತ್ರಿಕಾ ಪ್ರಕಟಣೆ

## ಜಯದೇವ ಸಂಸ್ಥೆಯಲ್ಲಿ 225 ಬಡರೋಗಿಗಳಿಗೆ ಉಚಿತ ಸ್ಟಂಟ್ ಅಳವಡಿಕೆ

**ಡಾ. ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಮತ್ತು ಮೆಡ್ಟ್ರಾನಿಕ್ ವ್ಯಾಸ್ಕುಲರ್ ಡಿವಿಷನ್, ಅಮೆರಿಕಾ ಇವರ ಸಹಭಾಗಿತ್ವದೊಂದಿಗೆ**

- **ಎಲ್ಲಾ ಹೃದ್ರೋಗಿಗಳಿಗೂ ಸ್ಟಂಟ್‌ಗಳ ಉಚಿತ ಅಳವಡಿಕೆ**
- **ಈ ಕಾರ್ಯಾಗಾರದಲ್ಲಿ ಚಿಕಿತ್ಸೆ ಪಡೆದವರೆಲ್ಲರೂ ಬಡರೈತರು, ದಿನಗೂಲಿ ನೌಕರರು, ಆಟೋರಿಕ್ಷಾ ಚಾಲಕರು, ಬೀದಿಬದಿಯ ಕಾರ್ಮಿಕರು ಹಾಗೂ ನಿಸ್ಸಹಾಯಕ ಹಿರಿಯ ನಾಗರೀಕರು.**

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಶಾಖೆ ಸೇರಿ ಕೇವಲ 7 ದಿವಸಗಳಲ್ಲಿ ಕಡುಬಡವರು ಮತ್ತು ನಿಸ್ಸಹಾಯಕ ಹೃದ್ರೋಗಿಗಳಿಗೆ ಆಯೋಜಿಸಿದ್ದ ಆಂಜಿಯೋಪ್ಲಾಸ್ಟಿ ಕಾರ್ಯಾಗಾರದಲ್ಲಿ ಸುಮಾರು 225 ಬಡರೋಗಿಗಳಿಗೆ ಆಂಜಿಯೋಪ್ಲಾಸ್ಟಿ ಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಯಿತು ಹಾಗೂ ಈ ಎಲ್ಲಾ ರೋಗಿಗಳಿಗೂ ಸ್ಟಂಟ್‌ಅನ್ನು ಉಚಿತವಾಗಿ ಅಳವಡಿಸಲಾಗಿದೆ. **ರಾಜ್ಯದ ಹೃದ್ರೋಗಿಗಳನ್ನೊಳಗೊಂಡಂತೆ ಪಶ್ಚಿಮ ಬಂಗಾಳ, ಆಂಧ್ರ ಮತ್ತು ತಮಿಳುನಾಡು, ತೆಲಾಂಗಾಣರವರಿಗೂ ಚಿಕಿತ್ಸೆ ನೀಡಲಾಯಿತು.**

ಡಾ. ಸಿ.ಎನ್.ಮಂಜುನಾಥ್, ನಿರ್ದೇಶಕರವರ ಪ್ರಕಾರ 225 ಆಂಜಿಯೋಪ್ಲಾಸ್ಟಿ ಚಿಕಿತ್ಸೆಯನ್ನು ಕೇವಲ 7 ದಿವಸಗಳಲ್ಲಿ ಮಾಡುವುದು ಒಂದು ಬೃಹತ್ ಸಾಧನೆ. ಈ ಅಸಾಧಾರಣ ಕಾರ್ಯಾಗಾರವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ 17 ಕ್ಯಾತ್‌ಲ್ಯಾಬ್, 120 ನುರಿತ ಸಂಸ್ಥೆಯ ವೈದ್ಯರು ಹಾಗು ತಂತ್ರಜ್ಞರು ಮತ್ತು ಶುಶ್ರೂಷಕರು, ಡಿ-ದರ್ಜೆ ನೌಕರರ ಕೌಶಲ್ಯತೆ ಮತ್ತು ಗುಣಮಟ್ಟದ ಮೂಲಭೂತ ಸೌಕರ್ಯದ ಪೂರೈಕೆಯಿಂದ ಇದು ಸಾಧ್ಯವಾಗಿದೆ. ಅಲ್ಲದೇ ಎಲ್ಲರ ಕಾರ್ಯಾದಕ್ಷತೆ ಮತ್ತು ಸಮರ್ಪಣಾ ಭಾವದ ಸೇವೆಯೇ ಕಾರಣವಾಗಿದೆ.

DR.C.N.MANJUNATH
MBBS. MD. DM (Cardiology)
Professor of Cardiology &
DIRECTOR

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್
Sri Jayadeva Institute of Cardiovascular Sciences and Research
(Govt. of Karnataka – Regd. Autonomous Institute)
Bannerghatta Road, 9th Block Jayanagar, Bengaluru – 560069
Direct Line: 22977456, Phone: 91- 80- 22977422, 433, EPABX: 22977400, 500
Fax: 91 - 80 -26534477, TeleFax: 22977422, Email: director@jayadevacardiology.c
drcnmanjunath@gmail.com ,Website: www.jayadevacardiology.com

Date:

Ref:

ಎಲ್ಲ ರೋಗಿಗಳು ಬಡರೈತರು, ದಿನಗೂಲಿ ನೌಕರರು, ಬೀದಿಬದಿಯ ಕಾರ್ಮಿಕರು ಹಾಗೂ ನಿಸ್ಸಹಾಯಕ ಹಿರಿಯ ನಾಗರೀಕರಾಗಿರುತ್ತಾರೆ. ಡಾ. ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್, ಇಲಿನಾಯಿಸ್, ಅಮೇರಿಕಾ ಮತ್ತು ಮೆಡ್ಟ್ರಾನಿಕ್ ವ್ಯಾಸ್ಕುಲರ್ ಡಿವಿಷನ್, ಅಮೇರಿಕಾರವರ ವತಿಯಿಂದ ಕಾರ್ಯಾಗಾರಕ್ಕೆ ಸ್ಟಂಟ್‌ಗಳ ಉದಾರ ಕೊಡುಗೆಯನ್ನು ನೀಡಿರುತ್ತಾರೆ.

ಡಾ.ಸಿ.ಎನ್.ಮಂಜುನಾಥರವರ ಪ್ರಕಾರ ಹೃದಯಾಘಾತಕ್ಕೆ ಸಂಬಂಧಿತ ಕಾಯಿಲೆಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಬಡವ ಬಲ್ಲಿದನೆಂಬ ಬೇದಭಾವವಿಲ್ಲದೆ ಜನರ ಆತಂಕಕ್ಕೆ ಕಾರಣವಾಗಿದೆ. ಈ ಕಾರ್ಯಾಗಾರದಲ್ಲಿ 31 ವರ್ಷದ ದಿನಗೂಲಿ ರೈತಾಪಿಯಾಗಿದ್ದು ಅತ್ಯಂತ ಕಿರಿಯ ವಯಸ್ಸಿನವರಾಗಿದ್ದು, 85 ವರ್ಷದ ಅಶಕ್ತ ಹಿರಿಯ ನಾಗರೀಕರಿರುತ್ತಾರೆ. ಶೇಕಡಾ 25% ರಷ್ಟು ರೋಗಿಗಳು 50 ವರ್ಷಕ್ಕೂ ಕಡಿಮೆ ವಯಸ್ಕರಾಗಿದ್ದಾರೆ ಹಾಗೂ ಶೇಕಡಾ 78% ರೋಗಿಗಳು ಗಂಡಸರು ಮತ್ತು ಉಳಿದವರು ಹೆಂಗಸರು. ಚಿಕಿತ್ಸೆ ಪಡೆದ 225 ರೋಗಿಗಳಲ್ಲಿ ಕಂಡುಬಂದ ಪ್ರಮುಖ ಕಾರಣಗಳು ಈ ಕೆಳಕಂಡಂತಿವೆ, ಶೇಕಡ 50% ರಷ್ಟು ರೋಗಿಗಳಲ್ಲಿ ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ - ಶೇಕಡ 53%, ಧೂಮಪಾನ - ಶೇಕಡ 36% ರಷ್ಟು ಹಾಗೂ ಅಧಿಕ ಕೊಲೆಸ್ಟ್ರಾಲ್ - ಶೇಕಡ 30% ಕಂಡುಬಂದಿದೆ.

ಡಾ. ಜಿ. ಸುಬ್ರಮಣಿರವರ ಸಾಮಾಜಿಕ ಕಳಕಳಿ, ಉದಾರವಾದ ಕೊಡುಗೆ, ದೇಶಾಭಿಮಾನ ಮತ್ತು ಬಡರೋಗಿಗಳ ಚಿಕಿತ್ಸೆಯಲ್ಲಿ ಕಳೆದ ಹನ್ನೆರಡು ವರ್ಷಗಳಿಂದ ಭಾಗವಹಿಸುತ್ತಿರುವುದು, ಇತರೆ ಎಲ್ಲಾ ಅನಿವಾಸಿ ಭಾರತೀಯ ವೈದ್ಯರುಗಳಿಗೆ ಮಾದರಿಯಾಗಿರುತ್ತಾರೆ.

ಡಾ. ಸಿ.ಎನ್. ಮಂಜುನಾಥ್ ರವರು ಆಂಜಿಯೋಪ್ಲಾಸ್ಟಿ ಚಿಕಿತ್ಸೆ ಪಡೆದ ರೋಗಿಗಳೊಡನೆ ಮಾತನಾಡಿ – ಅವರಿಗೆ ಸೂಚಿಸಿರುವಂತಹ ಬ್ಲಡ್ ತಿನ್ನಿಂಗ್ ಮಾತ್ರೆಗಳನ್ನು ನಿಲ್ಲಿಸಬಾರದೆಂದು ತಿಳಿಸಿದರು, ನಿಲ್ಲಿಸಿದಲ್ಲಿ ಮತ್ತೆ ಹೃದಯಾಘಾತವಾಗುವ ಸಾಧ್ಯತೆ ಹೆಚ್ಚು ಎಂದು ಹೇಳಿದರು. ಅಲ್ಲದೇ ರಕ್ತದೊತ್ತಡ ಮತ್ತು ಸಕ್ಕರೆ ಅಂಶದಲ್ಲಿ ನಿಯಂತ್ರಣ, ಹೆಚ್ಚಿನ ತರಕಾರಿ ಮತ್ತು ಹಣ್ಣುಗಳ ಸೇವನೆ ಮತ್ತು ದಿನನಿತ್ಯ ವ್ಯಾಯಾಮವನ್ನು ಮಾಡಲು ಸೂಚಿಸಿದರು. ನಾವು ಕೊಟ್ಟಂತಹ ಸ್ಟಂಟ್ ಸಮರ್ಪಕವಾಗಿ ಬಡವರಿಗೆ ಉಪಯೋಗವಾಗುತ್ತಿದೆ.

ಸಿ. ಎನ್. ಮಂಜುನಾಥ್

**ಡಾ. ಸಿ.ಎನ್. ಮಂಜುನಾಥ್**
ನಿರ್ದೇಶಕರು
ಎಸ್‌ಜೆಐಸಿಆರ್ ಬೆಂಗಳೂರು